

# ‘ಸಾಮಾನ್ಯ’ ಎನ್ನುವ ಪೊರೆವ ಶಕ್ತಿ

■ ಸ್ವಯಂಪ್ರಭಾ

ಶ್ರೀಸಾಮಾನ್ಯರು, ಜನಸಾಮಾನ್ಯರು ಎನ್ನುವ ಸಂಬೋಧನೆಗಳನ್ನು ನಾವು ತುಂಬಾ ಸುಲಭವಾಗಿ ಬಳಸುತ್ತೇವೆ. ಈ ಸಾಮಾನ್ಯರು ಲೋಕದ ದೈನಂದಿನ ಬದುಕನ್ನು ನಡೆಸಿಕೊಂಡು ಹೋಗುವ ಗಾಲಿಗಳಿದ್ದಂತೆ. ಬೊಕ್ಕಸಕ್ಕೆ ಕೊರತೆಯಾದರೆ ಶ್ರೀಸಾಮಾನ್ಯನ ಮೇಲೆ ತೆರಿಗೆಯ ಹೊರೆ, ಪೆಟ್ರೋಲ್, ಡೀಸೆಲ್‌ಗಳ ಮೇಲೆ ಹೆಚ್ಚುವರಿ ತೆರಿಗೆ, ಸಂಸ್ಥೆಗಳು ಕುಸಿದಾಗ ಶ್ರೀಸಾಮಾನ್ಯನ ವೇತನ ಕಡಿತದಿಂದ ಚೇತರಿಕೆಗೆ ಕ್ರಮಗಳು, ಭಾರೀ ದೊಡ್ಡ ಕಾರ್ಯಕ್ರಮಗಳನ್ನು ಮಾಡಬೇಕಾದರೆ ಶ್ರೀಸಾಮಾನ್ಯರಿಂದಲೇ ವಂತಿಗೆ ಸಂಗ್ರಹ, ಶ್ರೀಸಾಮಾನ್ಯರು ಹಾಕುವ ಹುಂಡಿ ಹಣದಿಂದಲೇ ಧಾರ್ಮಿಕ ವೈಭವಗಳು, ಸಮಾಜ ಕಾರ್ಯಗಳು ಒಟ್ಟಿನಲ್ಲಿ ಜಗತ್ತಿನ ಎಲ್ಲ ಆಗುಹೋಗುಗಳಲ್ಲಿಯೂ ಶ್ರೀಸಾಮಾನ್ಯರ ಮಹತ್ವದ ಪಾತ್ರವಿದೆ. ಆದರೂ ಅವರು ಎಲ್ಲಿಯೂ ಗುರುತಿಸಿಕೊಳ್ಳುವುದಿಲ್ಲ. ಮನ್ನಣೆ ಪಡೆಯುವುದಿಲ್ಲ. ದೇಶದ ಬದುಕು ಮಾತ್ರ ಅವರ ಹೆಗಲಿನ ಮೇಲೆಯೇ ನಡೆಯುತ್ತದೆ. ಅವರ ದೈನಂದಿನ ದುಡಿಮೆಯ ಆಧಾರದಲ್ಲಿಯೇ ವಿವಿಧ ಕ್ಷೇತ್ರಗಳು ವಿಸ್ತಾರಗೊಳ್ಳುತ್ತವೆ.

‘ಸಾಮಾನ್ಯ’ ಎಂಬ ಪದದ ಬಗ್ಗೆ ಎಷ್ಟೊಂದು ಹಗುರವಾದ ಗ್ರಹಿಕೆ ಇದೆ. ‘ಅದೊಂದು ಸಾಮಾನ್ಯ ವಿಷಯ ಬಿಡಿ...’ ಎಂದು ಹೇಳುತ್ತೇವೆ. ಯಾವುದಾದರೂ ವಸ್ತು ಅಥವಾ ವಿಷಯಗಳು ಬಹಳ ಸಂಖ್ಯೆಯಲ್ಲಿದ್ದಾಗ, ವ್ಯಾಪಕವಾಗಿದ್ದಾಗ, ಅದು ನಮ್ಮ ಪಾಲಿಗೆ ‘ಸಾಮಾನ್ಯ’ ಆಗಿಬಿಡುತ್ತದೆ.

ಸಾಮಾನ್ಯಕ್ಕಿಂತ ಭಿನ್ನವಾಗಿದ್ದಾಗ, ಅದನ್ನು ಪ್ರತಿಭೆ ಎಂದೂ ವಿಶೇಷವೆಂದೂ ಪರಿಗಣಿಸುವುದು ವಾಡಿಕೆ. ಪ್ರತಿಭೆ ಮತ್ತು ಸಾಧನೆಗಳಿಗೆ ಖಂಡಿತಾ ಗೌರವ ಸಲ್ಲಲೇಬೇಕು. ಮಕ್ಕಳ ವಿಚಾರದಲ್ಲಂತೂ ಪಾಲಕರು, ‘ತಮ್ಮ ಮಕ್ಕಳು ಪ್ರತಿಭಾವಂತರಾಗಿರಲಿ’ ಎಂದು ಆಸೆಪಡುತ್ತಾರೆ. ಪ್ರಶಸ್ತಿ, ಮಾನ ಸಮ್ಮಾನಗಳನ್ನು ಮಕ್ಕಳು ಪಡೆದಾಗ ಪಾಲಕರಿಗೆ ಸಂತೋಷವಾಗುವುದು ಸಹಜ.

ಪ್ರತಿಯೊಬ್ಬರಲ್ಲಿಯೂ ಒಂದಲ್ಲ ಒಂದು ರೀತಿಯ ಪ್ರತಿಭೆ ಇದ್ದೇ ಇರುತ್ತದೆ ಎಂಬುದು ಆಗಾಗ ಕೇಳಿಬರುವ ಮಾತು. ‘ಪ್ರತಿಭೆ’ ಎಂಬುದರ ವ್ಯಾಖ್ಯೆ ಏನು ಎಂಬುದನ್ನು ಅವಲಂಬಿಸಿ ಈ ಮಾತಿನ ತೂಕ ನಿರ್ಧಾರವಾಗುತ್ತದೆ. ತಮ್ಮ ಪಾಡಿಗೆ ತಮ್ಮ ಕೆಲಸ ಮಾಡಿಕೊಳ್ಳುತ್ತ, ತಕ್ಕಮಟ್ಟಿಗೆ ಅಂಕಗಳನ್ನು ಪಡೆಯುತ್ತ, ಒಂದೆರಡು ವಿಷಯಗಳಲ್ಲಿ ಫೇಲ್ ಆಗುತ್ತ, ಮತ್ತೆ ಪ್ರಯತ್ನಗಳನ್ನು ಮಾಡುತ್ತ, ಯಾವುದೇ ಸ್ಪರ್ಧೆಯ ಗೊಡವೆಗೆ ಹೋಗದೇ ಇರುವ ಮಕ್ಕಳನ್ನು ಶಾಲೆಗಳಲ್ಲಿ ‘average’ ಎಂದು ವರ್ಗೀಕರಣ ಮಾಡಿಬಿಡುತ್ತಾರೆ. ಭವಿಷ್ಯದಲ್ಲಿ ಈ ಮಕ್ಕಳೇ ಜನಸಾಮಾನ್ಯರಲ್ಲಿ ಒಬ್ಬರಾಗಿ, ಇತರರ ಪ್ರತಿಭೆಗಳಿಗೆ, ಸಾಧನೆಗಳಿಗೆ, ವೈಭವಗಳಿಗೆ, ದೇಶದ ಮುನ್ನಡೆಗೆ ಹೆಗಲಾಗಿರುತ್ತಾರೆ. ಬೃಹತ್ ಸೌಧವೊಂದು ಭವ್ಯವಾಗಿ ನಿಂತಿರುವಾಗ, ನೋಡುಗರು ಅದರಲ್ಲಿ ಚಿತ್ತಾರ ಕೆತ್ತನೆಗಳನ್ನು ಬಣ್ಣಿಸುತ್ತಾರೆ, ಗೋಡೆಯೊಳಗೆ ಸೇರಿಕೊಂಡ ಚಿತ್ತಾರವಿಲ್ಲದ ಕಂಬಗಳನ್ನು ಯಾರೂ ಮುಖ್ಯವೆಂದು ಗಮನಿಸುವುದಿಲ್ಲ. ಆದರೆ ಆ ವೈಭವದ ಸೌಧವನ್ನು ಕಂಬಗಳೇ ಹೊತ್ತಿರುತ್ತವೆ. ಪೋಷಕರು ಈ ವಿಚಾರವನ್ನು ಗಮನಿಸುವುದು ಬಹಳ ಕಡಿಮೆ.

ಅಮೀರ್ ಖಾನ್ ನಿರ್ದೇಶನದ ‘ತಾರೆ ಜಮೀನ್ ಪರ್’ ಬಾಲಿವುಡ್‌ನ ಪ್ರಸಿದ್ಧ ಸಿನಿಮಾ. ಡಿಸಲೆಕ್ಸಿಯಾ ಸಮಸ್ಯೆ ಇರುವ ಪುಟ್ಟ ಹುಡುಗನನ್ನು ಅರ್ಥಮಾಡಿಕೊಳ್ಳುವಲ್ಲಿ ಸೋಲುವ ಅಪ್ಪ–ಅಮ್ಮ ‘ಅವನು ಪ್ರತಿಭಾವಂತನಲ್ಲ’ ಎಂದು ಬೇಸರದಲ್ಲಿರುತ್ತಾರೆ. ಅವನು ಬರೀ ಆಟವಾಡುತ್ತ, ಕಿತಾಪತಿ ಕೆಲಸ ಮಾಡುತ್ತಿರುತ್ತಾನೆ ಎಂಬ ಆಕ್ಷೇಪದೊಂದಿಗೆ ವಸತಿ ಶಾಲೆಗೆ ಸೇರಿಸುತ್ತಾರೆ. ಅಲ್ಲಿ ಅವನೊಂದಿಗೆ ಕಲಾಶಿಕ್ಷಕರು ಬಹಳ ಅಕ್ಕರೆಯಿಂದ ಮಾತನಾಡುತ್ತಾರೆ. ಮುತುವರ್ಜಿ ವಹಿಸಿ ಅವನ ಸಮಸ್ಯೆಯನ್ನು ಗುರುತಿಸುತ್ತಾರೆ. ಅವರ ಮಾರ್ಗದರ್ಶನದಲ್ಲಿ ಅವನು ಕಲಾವಿದನಾಗಿ ಪ್ರಶಸ್ತಿ ಗೆಲ್ಲುವುದು ಸಾಧ್ಯವಾಗುತ್ತದೆ. ತಮ್ಮ ಮಗುವಿನಲ್ಲಿರುವ ಪ್ರತಿಭೆಯನ್ನು ತಾವು ಗುರುತಿಸಬೇಕಿತ್ತು ಎಂಬ ಪಶ್ಚಾತ್ತಾಪ ಭಾವನೆ ಅಪ್ಪ ಅಮ್ಮನ ಮನದಲ್ಲಿ ಮೂಡುತ್ತದೆ. ಇದು ಸಿನಿಮಾದ ಭಾವುಕ ಕತೆ.

ಎಷ್ಟೋ ಸಂದರ್ಭಗಳಲ್ಲಿ ಪ್ರಶಸ್ತಿ ಪುರಸ್ಕಾರಗಳನ್ನು ಪಡೆಯುವುದು ಸಾಧ್ಯವಾಗದೇ ಇದ್ದಾಗ, ಅಂತಹ ಮಕ್ಕಳ ಅಪ್ಪ ಅಮ್ಮಂದಿರ ಮನದಲ್ಲಿ ಅಸಮಾಧಾನ ಮೂಡಿದರೆ ಅದನ್ನು ಹೇಗೆ ಅರ್ಥೈಸುವುದು? ಆ ಕಾರಣದಿಂದಲೇ, ಪ್ರತಿಭೆ, ಸನ್ಮಾನ, ಪುರಸ್ಕಾರಗಳಿಗಿಂತ, ‘ಸಾಮಾನ್ಯರು’ ಎಂಬ ವರ್ಗ ಒಟ್ಟು ಸಮಾಜದ ಮುನ್ನಡೆಗೆ ಬಹಳ ಮುಖ್ಯ ಎಂಬ ಅರಿವನ್ನು ಪಾಲಕರಲ್ಲಿ ಮನಗಾಣಿಸಬೇಕಾಗಿದೆ.

ಶಾಲೆಗಳಲ್ಲಿ ನಡೆಯುವ ಪೋಷಕರ ಸಭೆಗಳಲ್ಲಿ ಈ ನಿಟ್ಟಿನಲ್ಲಿ ಸಮಾಲೋಚನೆಗಳನ್ನು ನಡೆಸಬಹುದು. ಉಪನ್ಯಾಸ, ಸಂವಾದಗಳು ನೆರವಾಗಬಹುದು. ಪೋಷಕರ ಮನಸ್ಸಿನಲ್ಲಿರುವ ಧೋರಣೆ ಕೂಡ ಬದಲಾಗಬೇಕು. ಸಂತೃಪ್ತಿಯ ಭಾವ ಅವರಲ್ಲಿದ್ದರೆ ಮಕ್ಕಳ ಬದುಕು ಹಗುರವಾಗುವುದು. ■




ಶ್ರೀ ದುರ್ಗಾಪರಮೇಶ್ವರಿ ಜ್ಯೋತಿಷ್ಯಾಲಯ

ಶ್ರೀ ದುರ್ಗಾಪರಮೇಶ್ವರಿ ಪೂಜಾಫಲದಿಂದ

ಫೋನಿನ ಮೂಲಕ ಭವಿಷ್ಯ ತಿಳಿಸುತ್ತಾರೆ

ಉಚಿತ ಭವಿಷ್ಯ ಶಾಶ್ವತ ಪರಿಹಾರ

ನಿಮ್ಮ ಸಮಸ್ಯೆಗಳಾದ ಉದ್ಯೋಗ, ವಿವಾಹ, ಸಂತಾನ, ಸ್ತ್ರೀ–ಪುರುಷ ಪ್ರೇಮವಿಚಾರ, ವಶೀಕರಣ, ಅತ್ತೆ–ಸೊಸೆ ಕಲಹ, ಗಂಡ–ಹೆಂಡತಿ ಕಿರಿಕಿರಿ ಶತ್ರು ಕಾಟ, ಸಾಲಬಾಧೆ, ಮಾಟ–ಮಂತ್ರ

ಇನ್ನು ಅನೇಕ ಸಮಸ್ಯೆಗಳಿಗೆ ಸ್ತ್ರೀ–ಪುರುಷ ವಶೀಕರಣ ಇಷ್ಟಪಟ್ಟವರು ನಿಮ್ಮಂತೆ ಆಗಲು ಕೇರಳ ಹಾಗೂ ಕೊಳ್ಳೆಗಾಲ ಪೂಜಾ ಶಕ್ತಿಯಿಂದ 5 ದಿನಗಳಲ್ಲಿ ಶಾಶ್ವತ ಪರಿಹಾರ

ನೀವು ಹಲವಾರು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಪರಿಹಾರಕ್ಕಾಗಿ ಸಂಪರ್ಕಿಸಿ.

ಪಂಡಿತ್ ಸುರೇಂದ್ರ ಭಟ್

9900305071